ಕರ್ನಾಟಕ ಸರ್ಕಾರ
ಕೃಷಿ ಇಲಾಖೆ

ಸಂಖ್ಯೆ:ಕೃಇ/ಆತ್ಮ/ರೈತ ಪ್ರಶಸ್ತಿ/2014-15

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ 14.07.2014

## ಕಛೇರಿ ಆದೇಶ

**ವಿಷಯ: ರಾಜ್ಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆತ್ಮ ಯೋಜನೆ ವತಿಯಿಂದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳ ವಿತರಿಸುವ ಕುರಿತು**

**ಉಲ್ಲೇಖ:1. ದಿನಾಂಕ 23.05.2014 ರ ಆತ್ಮ ಯೋಜನೆ 2014-15 ರ ಕ್ರಿಯಾ ಯೋಜನೆ ಸಭೆಯ ನಡವಳಿಗಳು**
**2. ಸುತ್ತೋಲೆ ಸಂಖ್ಯೆ ಕೃವಾವಿ/ತಾಂ-2/45/ಕೃಪಂಪ್ರ/2013-14, ದಿ 15.03.2014**
**3. ಸುತ್ತೋಲೆ ಸಂಖ್ಯೆ ಕೃವಾವಿ/ತಾಂ-2/46/ಕೃಪ್ರ/2013-14, ದಿ 21.04.2014**

~*~*~*~

108/14

ವಿಷಯಕ್ಕೆ ಸಂಬಂಧಿಸಿದಂತೆ ಇಲಾಖೆಯು 2001-02 ರಿಂದಲೂ ಕೃಷಿ ಪಂಡಿತ, ಕೃಷಿ ಪ್ರಶಸ್ತಿಗಳನ್ನು ಪ್ರಗತಿ ಪರ ರೈತರ ಸಾಧನೆಗಳನ್ನು ಗುರುತಿಸಿ ಪ್ರತಿ ವರ್ಷವು ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಮಾವೇಶಗಳ ಮೂಲಕ ಪ್ರಶಸ್ತಿಗಳನ್ನು ವಿತರಿಸಿರುತ್ತಿದೆ. ಇದೇ ಮಾದರಿಯಲ್ಲಿ ಈ ವರ್ಷದಿಂದ ಆತ್ಮ ಯೋಜನೆಯಲ್ಲಿಯು ರಾಜ್ಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ಪ್ರಗತಿಪರ ರೈತರ ಸಾಧನೆಗಳನ್ನು ಗುರುತಿಸಿ ಪುರಸ್ಕರಿಸಲು ತೀರ್ಮಾನಿಸಲಾಗಿದೆ. ಮೇಲೆ ತಿಳಿಸಿರುವ ಉಲ್ಲೇಖಗಳ ಸುತ್ತೋಲೆಯಲ್ಲಿ ತಿಳಿಯಪಡಿಸಿರುವಂತೆ ಕೃಷಿ ಪಂಡಿತ ಹಾಗೂ ಕೃಷಿ ಪ್ರಶಸ್ತಿಗಳ ಆಯ್ಕೆಯ ಮಾನ ದಂಡಗಳಲ್ಲಿನ ಅಂಶಗಳನ್ನು ಸಮಾನಾಂತರವಾಗಿ ಆತ್ಮ ಯೋಜನೆಯಲ್ಲೂ ಶ್ರೇಷ್ಟ ಕೃಷಿಕ ಪ್ರಶಸ್ತಿಗಳನ್ನು ಆಯ್ದ ರೈತರಿಗೆ ಪುರಸ್ಕರಿಸುವಂತೆ ಸೂಚಿಸಲಾಗಿದೆ. ಇದರಿಂದ ಒಟ್ಟಾರೆಯಾಗಿ ಹೆಚ್ಚಿನ ಪ್ರಮಾಣದಲ್ಲಿ ರೈತರನ್ನು ಅವರ ಸಾಧನೆಯನುಸಾರ ಪುರಸ್ಕರಿಸುವುದರಿಂದ ಕೃಷಿ ವಿಸ್ತರಣೆಯ ಸೇವೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವಲ್ಲಿ ಸಹಕಾರಿಯಾಗುವುದು. ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮ ಜರುಗಿಸಲು ತೀರ್ಮಾನಿಸಲಾಗಿದೆ.

1. ರಾಜ್ಯ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಒಟ್ಟು 10 ಪ್ರಗತಿ ಪರ ರೈತರಿಗೆ ಹಾಲಿಯಿರುವ ರಾಜ್ಯ ಮಟ್ಟದ ಕೃಷಿ ಪಂಡಿತ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲು ಎರಡು ಸಮೇತಿ ನಿರ್ದೇಶಕರು ಕ್ರಮ ವಹಿಸುವುದು.
2. ಶ್ರೇಷ್ಠ ಕೃಷಿಕ ಪ್ರಶಸ್ತಿಯು ಹತ್ತು ರೀತಿಯಲ್ಲಿರುವಂತೆ ಬೇರೆ ಬೇರೆ ಪ್ರಗತಿ ಪರ ರೈತರು ಅನುಷ್ಠಾನ ಮಾಡುತ್ತಿರುವ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಪ್ರತಿ ನಿಧಿಸುವಂತೆ ಆಯ್ಕೆ ಮಾಡುವುದು ಅಂದರೆ 1)ಕೃಷಿಯಲ್ಲಿ ಸಮಗ್ರ ಬೆಳೆ ಪದ್ಧತಿ, 2)ಸಮಗ್ರ ನೀರು ನಿರ್ವಹಣೆ, 3)ಸಾವಯವ ಕೃಷಿ ಅಭಿವೃದ್ಧಿ, 4)ವೈಜ್ಞಾನಿಕ ಯಂತ್ರೋಪಕರಣಗಳ ಬಳಕೆ, 5) ತೋಟಗಾರಿಕೆ, 6)ಹೈನುಗಾರಿಕೆ, 7)ಕೋಳಿ ಸಾಕಾಣಿಕೆ, 8)ಮೀನುಗಾರಿಕೆ, 9)ರೇಷ್ಮೆ ಬೇಸಾಯ, 10)ಹೈಟೆಕ್ ತಂತ್ರಜ್ಞಾನ ಅಳವಡಿಕೆ(ಹಸಿರು ಮನೆ,ಕಸಿ ಅಭಿವೃದ್ಧಿ, ಸಸ್ಯಕಾಶಿ ಇತ್ಯಾದಿ), 11) ಕೃಷಿ ಸಂಸ್ಕರಣೆ, 12)ಅರಣ್ಯ ಕೃಷಿ, ಆಡು, ಕುರಿ, ಮೊಲ ಇತ್ಯಾದಿ ಸಾಕಾಣಿಕೆ ಚಟುವಟಿಕೆಗಳು
3. ರಾಜ್ಯ ಮಟ್ಟದಿಂದ ಯೋಜನೆಯ ಶ್ರೇಷ್ಠ ಕೃಷಿಕ ಪ್ರಶಸ್ತಿ ಕುರಿತು ಮೇಲೆ ತಿಳಿಸಿದಂತೆ ಚಟುವಟಿಕೆವಾರು ಅರ್ಜಿಗಳನ್ನು ಆಹ್ವಾನಿಸಲು ದಿನಪತ್ರಿಕೆ ಹಾಗೂ ವೆಬ್‌ಸೈಟ್ ಮೂಲಕ ಪ್ರಕಟಣೆಗಳನ್ನು ನೀಡಲು ಎರಡು ಸಮೇತಿಗಳು ಕ್ರಮ ವಹಿಸುವುದು.
4. ರಾಜ್ಯ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಪ್ರತಿ ರೈತರಿಗೆ ರೂ 50,000/- ರಂತೆ ಒಟ್ಟು 10 ರೈತ ಸದಸ್ಯರಿಗೆ ಆತ್ಮ ಚಟುವಟಿಕೆಗೆ ಎ-7 ರಡಿಯಲ್ಲಿ ಅನುದಾನವನ್ನು ನಿಗಧಿಪಡಿಸಿದೆ.
5. ಈ ಪ್ರಕಾರ ಸಮೇತಿವಾರು ಸ್ವೀಕೃತಿಯಾಗುವ ಅರ್ಜಿಗಳನ್ನು ಸಮೇತಿ ನಿರ್ದೇಶಕರು ಪರಿಶೀಲಿಸಿ ಮೇಲೆ ತಿಳಿಸಿರುವ ಎರಡು ಅಂಶಗಳಿಗೆ ಅನ್ವಯವಾಗುವಂತೆ ಆಯ್ದ ಅಭ್ಯರ್ಥಿಗಳ ಕ್ಷೇತ್ರಗಳಿಗೆ ಸಮೇತಿ ಮಟ್ಟದ ಪರಿಶೀಲನಾ ತಂಡದೊಂದಿಗೆ ಭೇಟಿ ನೀಡಿ ಆಯ್ಕೆಯ ಅಂಶಗಳನ್ವಯ ಅಂಕಗಳನ್ನು ನೀಡಿ ಆದ್ಯತಾ ಪಟ್ಟಿಯನ್ನು ತಯಾರಿಸಬೇಕು.
6. ರಾಜ್ಯ ಮಟ್ಟದ ಪ್ರಶಸ್ತಿಯ ಈ ಆದ್ಯತಾ ಪಟ್ಟಿಯನ್ನು ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಶ್ರೇಷ್ಠ ಕೃಷಿಕ ಪ್ರಶಸ್ತಿಯ ಆಯ್ಕೆಗಾಗಿ ವರದಿಯನ್ನು ಮಂಡಿಸುವಂತೆ ಕ್ರಮ ವಹಿಸುವುದು.

D/NBR/2013-14/TA-4-2-2014

16/7

7. ಇದೇ ಮಾದರಿಯಲ್ಲಿ ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಪ್ರತಿ ಜಿಲ್ಲೆಗೆ ಪ್ರತಿ ರೈತರಿಗೆ ರೂ 25,000/- ರಂತೆ ಒಟ್ಟು 10 ರೈತರಿಗೆ ಹಾಗೂ ಪ್ರತಿ ತಾಲ್ಲೂಕಿಗೆ ಪ್ರತಿ ರೈತರಿಗೆ ರೂ 10,000/- ರಂತೆ ಒಟ್ಟು 5 ರೈತರಿಗೆ ಅನುದಾನ ಲಭ್ಯತೆಯನ್ನು ನೀಡಲಾಗಿದೆ.
8. ಇದರೊಂದಿಗೆ ಜಿಲ್ಲೆಯಲ್ಲಿರುವ ಪ್ರಗತಿಪರ ರೈತರ ಗುಂಪುಗಳನ್ನು ಪ್ರೋತ್ಸಾಹಿಸುವುದು ಮತ್ತು ಗುಂಪುಗಳ ಸಾಧನೆಗಳನ್ನು ಗುರುತಿಸಿ ಪುರಸ್ಕರಿಸುವ ನಿಟ್ಟನಲ್ಲಿ ಪ್ರತಿ ಜಿಲ್ಲೆಗೆ 5 ಗುಂಪುಗಳಿಗೂ ಪುರಸ್ಕರಿಸಲು ಕ್ರಮ ವಹಿಸಲು ಸೂಚಿಸಿದೆ.
9. ಜಿಲ್ಲಾ ಮಟ್ಟದ ಪ್ರಶಸ್ತಿಗಳ/ಗುಂಪುಗಳ ಪುರಸ್ಕಾರಕ್ಕಾಗಿ ಆಯ್ಕೆಯನ್ನು ಜಿಲ್ಲಾ ಮಟ್ಟದ ಕೃಷಿ ಪ್ರಶಸ್ತಿಗೆ ಆಯ್ಕೆ ಮಾಡುವ ಜಿಲ್ಲಾ ಮಟ್ಟದ ಸಮಿತಿಯೇ ಆಯ್ಕೆ ಮಾಡಲು ಕ್ರಮ ವಹಿಸುವುದು.
10. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳ ಆಯ್ಕೆಯನ್ನು ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿಗಳ ಆಯ್ಕೆ ಮಾಡುವ ನಿಬಂಧನೆಗಳನ್ವಯವೇ ಕ್ರಮಾಂಕ 2 ರಲ್ಲಿರುವಂತೆ ಚಟುವಟಿಕೆವಾರು ಮತ್ತು ಆಸಕ್ತ ಗುಂಪುಗಳ ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಬೇಕು.
11. ಮೇಲೆ ತಿಳಿಸಿರುವಂತೆ ಎಲ್ಲಾ ರೀತಿಯ ಪ್ರಶಸ್ತಿ/ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲು ವ್ಯಾಪಕ ಪ್ರಚಾರಕ್ಕೆ ದಿನಪತ್ರಿಕೆ/ಇತರ ಮಾಧ್ಯಮಗಳ ಮೂಲಕ ಪ್ರಕಟಣೆಗೆ ಕ್ರಮವಹಿಸುವುದು.
12. ಪ್ರಕಟಣೆಗೆ ಅನುಸಾರ ಸ್ವೀಕೃತಿಯಾಗುವ ಅರ್ಜಿಗಳನ್ನು ಪರಿಶೀಲಿಸಿ ಆಯ್ಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ/ಗುಂಪುಗಳಿಗೆ ಜಿಲ್ಲಾ ಮಟ್ಟದ ಪರಿಶೀಲನಾ ತಂಡವು ಕ್ಷೇತ್ರ ಭೇಟಿ ನೀಡಿ ಆಯ್ಕೆಯ ಅಂಶಗಳನ್ವಯ ಅಂಕಗಳನ್ನು ನೀಡಿ ಆದ್ಯತಾ ಪಟ್ಟಿಯನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೆ ಸಲ್ಲಿಸಿ ಅಂತಿಮಗೊಳಿಸಲು ಕ್ರಮ ವಹಿಸುವುದು.
13. ಜಿಲ್ಲಾ ಮಟ್ಟದ ಶ್ರೇಷ್ಟ ಕೃಷಿಕ ಪ್ರಶಸ್ತಿಗೆ ಮತ್ತು ತಾಲ್ಲೂಕು ಶ್ರೇಷ್ಠ ಕೃಷಿ ಪ್ರಶಸ್ತಿಗೆ ನಿಗಧಿತವಾದ ಅನುದಾನವನ್ನು ಕ್ರಮವಾಗಿ ಆತ್ಮ ಚಟುವಟಿಕೆಯ ರಾಜ್ಯ ಮಟ್ಟದ ಎ-7(ಅ) ಮತ್ತು ಜಿಲ್ಲಾ ಮಟ್ಟದ ಚಟುವಟಿಕೆ ಬಿ-7 ಹಾಗೂ ಗುಂಪುಗಳ ಪುರಸ್ಕಾರಕ್ಕಾಗಿ ಚಟುವಟಿಕೆ ಬಿ-7 ರ ಅಡಿಯಲ್ಲಿ ಅನುದಾನವನ್ನು ನಿಗಧಿಪಡಿಸಿದೆ.
14. ರಾಜ್ಯ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ಕೃಷಿ ಪಂಡಿತ ಪ್ರಶಸ್ತಿಗಳ ವಿತರಣಾ ಸಮಾವೇಶದಲ್ಲಿ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುವ ಕೃಷಿ ಪ್ರಶಸ್ತಿ ವಿತರಿಸುವ ಸಮಾವೇಶಗಳಲ್ಲಿ ವಿತರಿಸಲು ಕ್ರಮ ವಹಿಸುವುದು.

ಮೇಲೆ ತಿಳಿಸಿರುವಂತೆ ಆತ್ಮ ಯೋಜನೆಯಲ್ಲಿ ಅನುದಾನವು ಸಮರ್ಪಕವಾಗಿ ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಸದುಪಯೋಗವಾಗುವಂತೆ ಜಿಲ್ಲಾ ಮಟ್ಟದ ಪ್ರಗತಿಯನ್ನು ಸಾದಿಸುವಲ್ಲಿ ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಆಯ್ಕೆಯಾಗುವ ಅಭ್ಯರ್ಥಿಯು ಎರಡು ರೀತಿಯ ಪ್ರಶಸ್ತಿಗಳನ್ನು ಅಂದರೆ ಇದೇ ತೆರನಾದ/ಸಮಾನಾಂತರವಾದ ಇತರೆ ಯೋಜನೆಗಳಲ್ಲಿ ಪ್ರಶಸ್ತಿಗಳನ್ನು ಪಡೆದಿಲ್ಲದಿರುವುದನ್ನು ದೃಢೀಕರಿಸಿ ಕ್ರಮ ಜರುಗಿಸುವಂತೆ ಸಂಬಂಧಪಟ್ಟವರೆಲ್ಲರಿಗೂ ಸೂಚಿಸಲಾಗಿದೆ.

ಕೃಷಿ ಆಯುಕ್ತರು ಹಾಗೂ
ರಾಜ್ಯ ನೋಡಲ್ ಅಧಿಕಾರಿಗಳು(ಆತ್ಮ)

ಪ್ರತಿಯನ್ನು
ಪ್ರಧಾನ ಕಾರ್ಯದರ್ಶಿಗಳು ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
ಪ್ರತಿಯನ್ನು ಈ ಕೆಳಕಂಡವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ನೀಡಿದೆ.

1. ನಿರ್ದೇಶಕರು ಸಮೇತಿ(ಉ/ದ) ಹಾಗೂ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು/ಧಾರವಾಡ ಮೇಲೆ ತಿಳಿಸಿರುವಂತೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಆತ್ಮ ಚಾಲನಾ ಸಮಿತಿ ಮತ್ತು ಅಧ್ಯಕ್ಷರು ಜಿಲ್ಲಾ ಕೃಷಿ ಪ್ರಶಸ್ತಿ ಆಯ್ಕೆ ಸಮಿತಿ
3. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು &ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕೃಷಿ ಪ್ರಶಸ್ತಿ ಆಯ್ಕೆ ಸಮಿತಿ
4. ಅಪರ ಕೃಷಿ ನಿರ್ದೇಶಕರು(ಮಾಸಂಅ)&ಸದಸ್ಯಕಾರ್ಯದರ್ಶಿಗಳು, ರಾಜ್ಯ ಕೃಷಿ ಪಂಡಿತ ಆಯ್ಕೆ ಸಮಿತಿ
5. ಕೃಷಿ ನಿರ್ದೇಶಕರ ಆಪ್ತ ಸಹಾಯಕರು/ಜಕೃನಿ(ವಿ&ತ)/ಉಕೃನಿ(ವಾರ್ತಾ)/ಆತ್ಮ ಘಟಕ ಸೂಕ್ತ ಕ್ರಮಕ್ಕಾಗಿ
6. ಅ.ಕೃ.ನಿ (ತಂಬ್ರ) - ...

D/NBR/2013-14/TA-4-2-2014